## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 671 |
| ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21-02-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿರುವ ಅನೇಕ ಹೆದ್ದಾರಿ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾರಣಕ್ಕಾಗಿ ಹೆದ್ದಾರಿ ರಸ್ತೆಗಳು ಹದಗಟ್ಟಿರುತ್ತವೆ: (ವಿವರವಾದ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿನ ಹೆದ್ದಾರಿಗಳ ಕೆಲವು ಭಾಗಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಹೆದ್ದಾರಿಗಳಲ್ಲಿ ಗುಂಡಿಗಳು ಈ ಕೆಳಕಂಡ ಸಾಮಾನ್ಯ ಕಾರಣಗಳಿಂದ ಉಂಟಾಗುತ್ತವೆ.<br>• ಅತಿವೃಷ್ಟಿ / ಜಡಿ ಮಳೆಯ ಕಾರಣ ರಸ್ತೆಯ ಮೇಲೆ ಬಿದ್ದ ನೀರು ಕೂಡಲೇ ರಸ್ತೆ ಬದಿ ಚರಂಡಿಗೆ ಹರಿಯದೇ ಇರುವುದು.<br>• ರಸ್ತೆ ಬದಿಗಳಲ್ಲಿ ಇರುವ ಮರಗಳ ಅಡಿಯಲ್ಲಿ ಮಳೆ ನೀರು ತ್ವರಿತವಾಗಿ ಒಣಗದೇ ಇರುವುದು.<br>• ರಸ್ತೆಯನ್ನು ವಿನ್ಯಾಸಗೊಳಿಸಿದ ವಾಹನಗಳ ಭಾರಕ್ಕಿಂತ ಅಧಿಕ ಭಾರದ ವಾಹನಗಳು ಹೆದ್ದಾರಿಗಳಲ್ಲಿ ಸಂಚರಿಸುವುದು.<br>• ರಸ್ತೆಗಳಲ್ಲಿ ಸಾರ್ವಜನಿಕರು, ಖಾಸಗಿ ಸಂಸ್ಥೆಗಳು ಪೈಪ್‌ಲೈನ್, ಕೇಬಲ್ ಮುಂತಾದ ನಾಗರಿಕ ಸೌಲಭ್ಯ ಗಳನ್ನು ಅಳವಡಿಸಲು ರಸ್ತೆ ಅಗೆದು, ಕೆಲಸ ಮುಗಿದ ನಂತರ ರಸ್ತೆಯನ್ನು ಪೂರ್ವ ಸ್ಥಿತಿಗೆ ತರದೇ ಇರುವುದು.<br>ಹದಗೆಟ್ಟ ರಸ್ತೆಗಳ ತಗ್ಗುಗುಂಡಿಗಳನ್ನು ತುಂಬಿ ವಾರ್ಷಿಕ ನಿರ್ವಹಣೆ ಕೈಗೊಳ್ಳಲಾಗುತ್ತದೆ. |
| ಆ) | ರಾಜ್ಯ ಹೆದ್ದಾರಿ ನಿರ್ವಹಣೆ ಮತ್ತು ಅವುಗಳ ಬಳಕೆಗೆ ಇರುವಂತಹ ಮಾನದಂಡಗಳೇನು; | ರಾಜ್ಯ ಹೆದ್ದಾರಿಗಳನ್ನು IRC 82: Code of Practice for Maintenance of Bituminous Road Surfaces ರ ವಿಶಿಷ್ಟ ವಿವರಣೆಗಳಂತೆ ನಿರ್ವಹಣೆ ಮಾಡಲಾಗುತ್ತಿದೆ. IRC Code ಪ್ರಕಾರ ನಿರ್ಮಿಸಿದ ರಸ್ತೆಗಳನ್ನು ಸದರಿ ಕೋಡ್‌ಗಳಲ್ಲಿ ನಮೂದಿಸಿದ ವಾಹನದ ಭಾರಕ್ಕೆ ಅನುಗುಣವಾಗಿ ಬಳಕೆ ಮಾಡಬಹುದಾಗಿದೆ. |

| | | |
|---|---|---|
| ಇ) | ತುಮಕೂರು ಮಾರ್ಗವಾಗಿ ಬೆಂಗಳೂರು ನಗರಕ್ಕೆ ಬೈಪಾಸ್ ರಸ್ತೆಯಲ್ಲಿ ನೂರಾರು ಗುಂಡಿಗಳು ಬಿದ್ದಿದ್ದು, ವಾಹನಗಳನ್ನು ರಸ್ತೆ ಗುಂಡಿಗಳಿಂದ ತಪ್ಪಿಸುವ ಸಂದರ್ಭದಲ್ಲಿ ವಾಹನ ಅಪಘಾತಗಳು ಸಂಭವಿಸುತ್ತಿರುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ; | ರಾಷ್ಟ್ರೀಯ ಹೆದ್ದಾರಿ–48 ರ ನೆಲಮಂಗಲದಿಂದ ತುಮಕೂರು ಭಾಗದ ಹೆದ್ದಾರಿಯನ್ನು ಷಟ್ಪಥ ರಸ್ತೆಯನ್ನಾಗಿ ನಿರ್ಮಿಸುವ ಕಾಮಗಾರಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ರಾಷ್ಟ್ರೀಯ ಹೆದ್ದಾರಿ–48ರ ಕಿ.ಮೀ.61.520 ರಿಂದ ಕಿ.ಮೀ.74.168 ರವರೆಗೆ ತುಮಕೂರು ನಗರಕ್ಕೆ ಹಾಲಿ ನಿರ್ಮಿಸಲಾಗಿರುವ ಷಟ್ಪಥ ಮೇಲ್ಸೇತುವೆಯನ್ನು ಗುಂಡಿ ರಹಿತ ರಸ್ತೆಯನ್ನಾಗಿಸಲು ಹಾಗೂ ಸುಗಮ ವಾಹನ ಸಂಚಾರಕ್ಕಾಗಿ ಸಂಬಂಧಪಟ್ಟ ಗುತ್ತಿಗೆದಾರರಿಂದ ಗುತ್ತಿಗೆ ಕರಾರಿನಂತೆ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. |
| ಇ) | ರಾಜ್ಯದ ಎಲ್ಲಾ ಕಡೆಗಳಲ್ಲಿ 6 ಲೈನ್ ಹೆದ್ದಾರಿ ರಸ್ತೆಗಳಿದ್ದು, ಹುಬ್ಬಳ್ಳಿ–ಧಾರವಾಡ ನಡುವೆ ಇರುವ 6 ಲೈನ್ ಹೆದ್ದಾರಿ ರಸ್ತೆ ಕಾಮಗಾರಿ ನಡೆಯುತ್ತಿದ್ದು, ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? | ರಾಷ್ಟ್ರೀಯ ಹೆದ್ದಾರಿ–48ರ ಕಿ.ಮೀ.403.10 ರಿಂದ ಕಿ.ಮೀ. 433.00 ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯನ್ನು ಷಟ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಸೆಪ್ಟೆಂಬರ್–2025 ರೊಳಗೆ ಪೂರ್ಣಗೊಳಿಸಲು ಗುರಿ ಹೊಂದಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 11 ಸಿಬಿಆರ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು